AUGUST 25, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಧಾರವಾಡ ಜಿಲ್ಲೆ, ಕುಂದಗೋಳದ, ಬೀಬಿ ಫಾತಿಮಾ ಮಹಿಳಾ ಸಂಘಕ್ಕೆ, 'ಈಕ್ವೇಟರ್ ಇನಿಷಿಯೇಟಿವ್' ಪ್ರಶಸ್ತಿಯ, ಗರಿ.**
- **ಆತ್ಮನಿರ್ಭರ ಭಾರತ, ಸಂಘಟನಾ ರಾಷ್ಟ ಪ್ರಶಸ್ತಿ; ಬಾಗಲಕೋಟೆ ಜಿಲ್ಲೆ, ಗುಳೇದಗುಡ್ಡದ, ಚಾಮುಂಡೇಶ್ವರಿ ಸಂಜೀವಿನಿ ಮಹಿಳಾ ಒಕ್ಕೂಟ, ಆಯ್ಕೆ.**
- **ಪುಣೆಯ ಗಾಯಕ ಸುಹಾಸ ವ್ಯಾಸ ಅವರಿಗೆ, ಪಂಡಿತ ಬಸವರಾಜ ರಾಜಗುರು ರಾಷ್ಟ್ರೀಯ ಪ್ರಶಸ್ತಿ, ಪ್ರದಾನ.**
- **ಸಂಚಾರ ನಿಯಮ ಉಲ್ಲಂಘನೆ; ಶೇಕಡ 50ರ ್ಟ ರಿಯಾಯಿತಿ ದಂಡ ಪಾವತಿಸಲು, ಸೆಪ್ಟಂಬರ್ 12 ರ ವರೆಗೆ ಅವಕಾಶ.**

<><><>

**ಈಗ ವಾರ್ತೆಗಳ ವಿವರ**

<><><>

**ಜೀವ ವೈವಿಧ್ಯ ಸಂರಕ್ಷಣಾ ಕ್ಷೇತ್ರದ, ನೊಬೆಲ್ ಎಂದೇ ಪ್ರಸಿದ್ಧಿ ಪಡೆದ, ವಿಶ್ವ ಸಂಸ್ಥೆ ಅಭಿವೃದ್ಧಿ ಕಾರ್ಯಕ್ರಮ, ಕೊಡಮಾಡುವ 'ಈಕ್ವೇಟರ್ ಇನಿಷಿಯೇಟಿವ್' ಪ್ರಶಸ್ತಿ, ಧಾರವಾಡ ಜಿಲ್ಲೆ ಕುಂದಗೋಳ ತಾಲೂಕು, ತೀರ್ಥ ಗ್ರಾಮದ, ದೇವಧಾನ್ಯ ರೈತ ಉತ್ಪಾದಕ ಕಂಪೆನಿ ಸಹಯೋಗದ, 'ಬೀಬಿ ಫಾತಿಮಾ ಮಹಿಳಾ ಸಂಘ'ಕ್ಕೆ ಲಭಿಸಿದೆ. ಈ ಪ್ರಶಸ್ತಿ, 10 ಸಾವಿರ ಅಮೆರಿಕನ್ ಡಾಲರ್, ಅಂದಾಜು ಎಂಟೂವರೆ ಲಕ್ಷ ರೂಪಾಯಿ ನಗದು ಬಹುಮಾನ, ಒಳಗೊಂಡಿದೆ.**

**ಈ ಕುರಿತು, ಒಂದು ವರದಿ..**

***ಹಳ್ಳಿ ಮಟ್ಟದಲ್ಲಿ ಕೃಷಿಯಾಧಾರಿತ ಆರ್ಥಿಕ ಚಟುವಟಿಕೆಗಳನ್ನು ನಡೆಸುತ್ತಿರುವ 'ಬೀಬಿ ಫಾತಿಮಾ ಮಹಿಳಾ ಸಂಘ', ಮಳೆಯಾಶ್ರಿತ ಜಮೀನುಗಳಲ್ಲಿ ಪರಿಸರ ಸ್ನೇಹಿ ಕೃಷಿ ವಿಧಾನ ಅಳವಡಿಕೆ, ಸಮುದಾಯ ಬೀಜ ಬ್ಯಾಂಕ್ ನಿರ್ವಹಣೆ, ಆಹಾರ***

*– ಪ್ರೋ 'ಕಾಂಶ ಭದ್ರತೆ, ಸಿರಿಧಾನ್ಯ ಬೇಸಾಯ, ಸಂಸ್ಕರಣಾ ಘಟಕ ನಿರ್ವಹಣೆ ಹಾಗೂ ಮೌಲ್ಯವರ್ಧನೆ ಸೇರಿದಂತೆ, ಹಲವು ಕ್ಷೇತ್ರಗಳಲ್ಲಿ ಅಪರೂಪದ ಸಾಧನೆ ಮಾಡಿದೆ.*

*30 ಗ್ರಾಮಗಳಲ್ಲಿ ನೈಸರ್ಗಿಕ ವಿಧಾನದಲ್ಲಿ ಸಿರಿಧಾನ್ಯ ಆಧಾರಿತ ಮಿಶ್ರ ಬೆಳೆ ಬೇಸಾಯವನ್ನು ಮರಳಿ ಚಾಲ್ತಿಗೆ ತಂದಿರುವುದು ಸಂಘದ ಹೆಗ್ಗಳಿಕೆಯಾಗಿದೆ.*

*ತೀರ್ಥ ಗ್ರಾಮದಲ್ಲಿ, ಕೇವಲ 15 ಮಹಿಳೆಯರಿಂದ, 2018 ರಲ್ಲಿ ಸ್ಥಾಪನೆಯಾದ ಬೀಬಿ ಫಾತಿಮಾ ಮಹಿಳಾ ಸಂಘ, ಸುಸ್ಥಿರ ಕೃಷಿಯ ಮೂಲಕ, ಸಣ್ಣ ಮತ್ತು ಅತಿ ಸಣ್ಣ ಕೃಷಿ ಕುಟುಂಬಗಳ ಜೀವನೋಪಾಯವನ್ನು ಸುಧಾರಿಸುವ ಪ್ರಯತ್ನಗಳನ್ನು ಶುರು ಮಾಡಿತು.*

*ಹೈದರಾಬಾದಿನ ಭಾರತೀಯ ಸಿರಿಧಾನ್ಯ ಸಂಶೋಧನಾ ಸಂಸ್ಥೆ, ಕೃಷಿ ಇಲಾಖೆ, 'ಸೆಲ್ಕೋ ಪ್ರತಿಷ್ಠಾನ, ಸ್ವಿಸ್ ಏಡ್ ಆರ್ಥಿಕ ನೆರವು ಹಾಗೂ ಮೈಸೂರಿನ ಸಹಜ ಸಮೃದ್ಧ ಸಂಸ್ಥೆಯ ಮಾರ್ಗದರ್ಶನದಲ್ಲಿ, 'ಬೀಬಿ ಫಾತಿಮಾ ಸಂಘ' ಸಿರಿಧಾನ್ಯಗಳ ನೂರಾರು ತಳಿಗಳನ್ನು ಸಂರಕ್ಷಿಸಿದೆ. ಸಮುದಾಯ ಬೀಜ ಬ್ಯಾಂಕ್ ಸ್ಥಾಪಿಸಿದೆ.*

*ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ, ಸಹಜ ಸಮೃದ್ಧದ ನಿರ್ದೇಶಕ ಜಿ.ಕೃಷ್ಣಪ್ರಸಾದ.*

<><><>

**ಆರತಿ ಧ್ವನಿ (50) + ಜಿ. ಕೃಷ್ಣಪ್ರಸಾದ ಧ್ವನಿ (50) ಸೆಕೆಂದುಗಳು**

<><><>

**ಬಾಗಲಕೋಟೆ ಜಿಲ್ಲೆ, ಗುಳೇದಗುಡ್ಡ ತಾಲೂಕು, ಕಟಗೇರಿ ಗ್ರಾಮ ಪಂಚಾಯಿತಿಯ, ಚಾಮುಂಡೇಶ್ವರಿ ಸಂಜೀವಿನಿ ಮಹಿಳಾ ಒಕ್ಕೂಟ, ಆತ್ಮನಿರ್ಭರ ಭಾರತ, ಸಂಘಟನಾ ರಾಷ್ಟ್ರ ಪ್ರಶಸ್ತಿಗೆ ಭಾಜನವಾಗಿದ್ದು, ಸಂತಸ ತಂದಿದೆ ಎಂದು, ಹಟ್ಟಿ ಚಿನ್ನದ ಗಣಿ ಅಧ್ಯಕ್ಷ ಹಾಗೂ ಬೀಳಗಿ ವಿಧಾನಸಭಾ ಕ್ಷೇತ್ರದ ಶಾಸಕ, ಜೆ.ಟಿ. ಪಾಟೀಲ, ಹರ್ಷ ವ್ಯಕ್ತ ಪಡಿಸಿದ್ದಾರೆ. ಗುಳೇದಗುಡ್ಡ ತಾಲೂಕು, ಕಟಗೇರಿ ಗ್ರಾಮ ಪಂಚಾಯಿತಿ, 2022–23ನೇ ಸಾಲಿನ, ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ, ನೂತನವಾಗಿ ನಿರ್ಮಿಸಿದ, ಸಾವಿತ್ರಿಬಾಯಿ ಫುಲೆ ಕೌಶಲಾಭಿವೃದ್ಧಿ ತರಬೇತಿ ಕೇಂದ್ರ, 'ಸಂಜೀವಿನಿ' ಕಟ್ಟಡವನ್ನು ಉದ್ಘಾಟಿಸಿ ಮಾತನಾಡಿದರು. ಕಟಗೇರಿ ಗ್ರಾಮ ಪಂಚಾಯಿತಿಯ, ಸಂಜೀವಿನಿ ಒಕ್ಕೂಟದಲ್ಲಿ, ಸಾವಿರದ 400 ಮಹಿಳೆಯರು ಸ್ವಾವಲಂಬಿಗಳಾಗಿದ್ದಾರೆ. ನೇಕಾರಿಕೆ, ಹೊಲಿಗೆ, ಊದುಬತ್ತಿ ತಯಾರಿಕೆ ಮುಂತಾದ ಗೃಹ ಉದ್ದಿಮೆಗಳಲ್ಲಿ ತೊಡಗಿಕೊಂಡು, ಗುಣಮಟ್ಟದ ಉತ್ಪನ್ನಗಳ ಮೂಲಕ, ರಾಷ್ಟ್ರದ ಗಮನ ಸೆಳೆದಿದ್ದಾರೆ, ಎಂದರು.**

<><><>

**87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸವಿನೆನಪಿನಲ್ಲಿ ಸಿದ್ಧಪಡಿಸಿದ, 'ಬೆಲ್ಲದಾರತಿ ಸ್ಮರಣ ಸಂಚಿಕೆ'ಯನ್ನು, ಮಂಡ್ಯದ ಬಿ.ಆರ್.ಅಂಬೇಡ್ಕರ್ ಭವನದಲ್ಲಿ, ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಬಿಡುಗಡೆಗೊಳಿಸಿದರು. ಮಂಡ್ಯ ಜಿಲ್ಲೆಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮುಂಬರುವ ಸಮ್ಮೇನಗಳ ಆಯೋಜಕರಿಗೆ**

ಮಾದರಿಯಾಗಿದೆ. ಸದ್ಯದಲ್ಲೇ, 2 ಕೋಟಿ 20 ಲಕ್ಷ ರೂಪಾಯಿ ಅಂದಾಜು ವೆಚ್ಚದಲ್ಲಿ, ಕನ್ನಡ ಭವನಕ್ಕೆ ಶಂಕುಸ್ಥಾಪನೆ ನೆರವೇರಿಸಲಾಗುವುದು ಎಂದರು.

<><><>

6ನೇ ಕನ್ನಡ ವೈದ್ಯ ಬರೆಹಗಾರರ, ರಾಜ್ಯ ಸಮ್ಮೇಳನ ಭಾರತೀಯ ವೈದ್ಯಕೀಯ ಸಂಘದ ಆಶ್ರಯದಲ್ಲಿ, ಎರಡು ದಿನಗಳ ಕಾಲ ಬಳ್ಳಾರಿಯಲ್ಲಿ, ಯಶಸ್ವಿಯಾಗಿ ನಡೆಯಿತು. ಡಾಕ್ಟರ್ ಅರವಿಂದ ಪಾಟೀಲ, ಕನ್ನಡ ವೈದ್ಯ ಬರೆಹಗಾರರ ಸಮ್ಮೇಳನದ, ಸರ್ವಾಧ್ಯಕ್ಷರಾಗಿದ್ದರು. 2024–25ನೇ ಸಾಲಿನ, ಶ್ರೇ ೃ ವೈದ್ಯ ಸಾಹಿತಿ ಮತ್ತು ವಾರ್ಷಿಕ ಕೃತಿ ಪ್ರಶಸ್ತಿಯನ್ನು, ಡಾಕ್ಟರ್ ಕೆ.ಎಸ್.ಪವಿತ್ರಾ ಹಾಗೂ ಡಾಕ್ಟರ್ ಆರ್. ಶಾಂತಲಾ ಕುಮಾರಿ ಅವರಿಗೆ, ಹಾಗೂ ಹಸ್ತಪ್ರತಿ ಪ್ರಶಸ್ತಿಯನ್ನು, ಡಾಕ್ಟರ್ ಕೆ.ಆರ್. ಶ್ರೀಧರ ಮತ್ತು ಡಾಕ್ಟರ್ ಕೆ.ಬಿ. ಸೂರ್ಯಕುಮಾರ ಅವರಿಗೆ ನೀಡಿ, ಗಣ್ಯರು ಗೌರವಿಸಿದರು.

<><><>

ಈಗ ಪ್ರಕಟಣೆ,
ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..
(43 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ **x** ಖಾತೆ **@airnews_Kannada** ಹಾಗೂ

ನಮ್ಮ ಫೇಸ್ಬುಕ್ ಖಾತೆ **Akashvani RNU Bengaluru-Dharwad** ಅನುಸರಿಸಿ.

<><><>

ಉತ್ತರಕನ್ನಡ ಜಿಲ್ಲೆ, ಅಂಕೋಲಾ ತಾಲೂಕು ಕೇಣಿಯಲ್ಲಿ, ಸರ್ವಋತು ಆಳ ಸಮುದ್ರದಹಸಿರು ಬಂದರು ನಿರ್ಮಾಣಕ್ಕೆ, ಖಾಸಗಿ ಸಹಭಾಗಿತ್ವದಲ್ಲಿ, ರಾಜ್ಯ ಸರ್ಕಾರ, 457 ಎಕರೆ ಪ್ರದೇಶದಲ್ಲಿ, 6 ಸಾವಿರದ 515 ಕೋಟಿ ರೂಪಾಯಿ ವೆಚ್ಚದ ಕಾಮಗಾರಿ, ಕೈಗೆತ್ತಿಕೊಳ್ಳಲು ಉದ್ದೇಶಿಸಿದೆ.

<><><>

ಕೇಣಿ ಬಂದರು ಯೋಜನೆ ವ್ಯಾಪ್ತಿಯ ಕೇಣಿ, ಭಾವಿಕೇರಿ, ಆಲಗೇರಿ ಹಾಗೂ ಶಿರಕುಳಿ ಗ್ರಾಮದ, ನೂರಾರು ಮೀನುಗಾರ ಮತ್ತು ರೈತ ಕುಟುಂಬಗಳು ನೆಲೆ ಕಳೆದುಕೊಳ್ಳುವ ಆತಂಕ ಎದುರಾಗಿದೆ ಎಂದು, ಅಂಕೋಲಾ ತಾಲೂಕಿನ, ಹಾರವಾಡ ಗ್ರಾಮ ಪಂಚಾಯ್ತಿ ಸದಸ್ಯರು, ಕಳವಳ ವ್ಯಕ್ತಪಡಿಸಿ, ಮುಖ್ಯಮಂತ್ರಿ ಅವರಿಗೆ, ಕಾಮಗಾರಿಯನ್ನು ಕೈಬಿಡುವಂತೆ, ಮನವಿ ಸಲ್ಲಿಸಿದ್ದಾರೆ.

<><><>

ಪಶ್ಚಿಮಘಟ್ಟದ ಪರಿಸರ ಸೂಕ್ಷ್ಮ ವಲಯದಲ್ಲಿ, ಬೃಹತ್ ಅಭಿವೃದ್ಧಿ ಕಾಮಗಾರಿ, ಸಮುದ್ರ ಆಧಾರಿತ ಉದ್ಯೋಗ ಮತ್ತು ಆಹಾರ ಭದ್ರತೆಗೆ, ಗಂಭೀರ ಹಾನಿ ಉಂಟು ಮಾಡಲಿದೆ ಎಂದು ಮಾಹಿತಿ ನೀಡಿದ್ದಾರೆ, ಕುಮಟಾದ ಹಿರಿಯ ಕಡಲಜೀವಶಾಸ್ತ್ರಜ್ಞ, ಪ್ರೊಫೆಸರ್ ವಿ.ಎನ್.ನಾಯಕ್.

<><><>

ಪ್ರೊಫೆಸರ್ ವಿ.ಎನ್.ನಾಯಕ್ ಧ್ವನಿ 48 ಸೆಕೆಂದುಗಳು

<><><>

ಸ್ವರ ಸಾಮ್ರಾಟ್, ಪಂಡಿತ ಬಸವರಾಜ ರಾಜಗುರು ರಾಷ್ಟ್ರೀಯ ಪ್ರಶಸ್ತಿಯನ್ನು, ಪುಣೆಯ ಪಂಡಿತ್ ಸುಹಾಸ ವ್ಯಾಸ, ಅಭಿಮಾನದಿಂದ ಸ್ವೀಕರಿಸಿದರು. ಧಾರವಾಡದ ಆಲೂರು ವೆಂಕಟರಾವ ಸಾಂಸ್ಕೃತಿಕ ಭವನದಲ್ಲಿ, ಜರುಗಿದ ಕಾರ್ಯಕ್ರಮದಲ್ಲಿ, ಗಣ್ಯರು, 1 ಲಕ್ಷ ರೂಪಾಯಿ ನಗದು ಹಾಗೂ ಸ್ಮರಣಿಕೆ ನೀಡಿ, ಸಂಗೀತದ ರಾಯಬಾರಿಯನ್ನು ಗೌರವಿಸಿದರು. ಧಾರವಾಡದ ಯುವ ವಾಯೋಲಿನ್ ವಾದಕಿ ವೀಣಾ ದಂಡಾವತಿಮಠ ಹಾಗೂ ರಾಯಚೂರಿನ ಹಾರ್ಮೋನಿಯಂ ವಾದಕ, ಚಿದಂಬರ ಜೋಶಿ ಅವರಿಗೆ, ಪಂಡಿತ ಬಸವರಾಜ ರಾಜಗುರು ಯುವ ಪುರಸ್ಕಾರದೊಂದಿಗೆ, ತಲಾ 25 ಸಾವಿರ ರೂಪಾಯಿ ನಗದು ಹಾಗೂ ಸ್ಮರಣಿಕೆ ನೀಡಿ, ಗಣ್ಯರು ಸತ್ಕರಿಸಿದರು.

<><><>

ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳನ್ನು, ಶೇಕಡ 50 ರ ಷ್ಟು ರಿಯಾಯಿತಿ ಅಡಿ, ಇತ್ಯರ್ಥ ಪಡಿಸಿಕೊಂಡು, ದಂಡ ಪಾವತಿಸಲು, ವಾಹನಗಳ ಮಾಲೀಕರಿಗೆ, ರಾಜ್ಯ ಸರ್ಕಾರ ಅವಕಾಶ ಕಲ್ಪಿಸಿದೆ. ಸೆಪ್ಟಂಬರ್ 12 ರ ವರೆಗೆ ದಂಡ ಪಾವತಿಗೆ, ಸರ್ಕಾರ ಶೇಕಡ 50ರ ಷ್ಟು ರಿಯಾಯಿತಿ ನೀಡಿದೆ. ಆನ್‌ಲೈನ್ ಪಾವತಿ ಜೊತೆಗೆ ತಮ್ಮ ಹತ್ತಿರದ ಸಂಚಾರ ಠಾಣೆ ಅಥವಾ ಸಂಚಾರ ನಿರ್ವಹಣಾ ಕೇಂದ್ರದ ಕೌಂಟರ್‌ನಲ್ಲಿ ದಂಡ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ. ಕರ್ನಾಟಕ ಸ್ಟೇಟ್ ಪೊಲೀಸ್ ಅಪ್ಲಿಕೇಶನ್ ಅಥವಾ ಬೆಂಗಳೂರು ಪೊಲೀಸ್ ಬಿ.ಟಿ.ಪಿ. ಅಸ್ತ್ರಂ ಆ್ಯಪ್ ಬಳಸಿ, ತಮ್ಮ ವಾಹನ ನೋಂದಣಿ ಸಂಖ್ಯೆ ನೀಡಿ, ಬಾಕಿ ಇರುವ ಸಂಚಾರ ದಂಡಗಳನ್ನು ಪರಿಶೀಲಿಸಬಹುದು.

<><><>

ಬೆಂಗಳೂರಿನಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, 1 ಲಕ್ಷ 48 ಸಾವಿರದ 747 ಪ್ರಕರಣಗಳು ಇತ್ಯರ್ಥಗೊಂಡು, 4 ಕೋಟಿ 18 ಲಕ್ಷದ 20 ಸಾವಿರದ 500 ರೂಪಾಯಿ ದಂಡ ಪಾವತಿಯಾಗಿದೆ ಎಂದು, ಸಂಚಾರ ಪೊಲೀಸರು ಎಕ್ಸ್ ಮಾಧ್ಯಮದಲ್ಲಿ, ಮಾಹಿತಿ ನೀಡಿದ್ದಾರೆ.

<><><>

ಧಾರವಾಡ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ, 1 ಲಕ್ಷ, 13 ಸಾವಿರದ 4 ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳು ದಾಖಲಾಗಿದ್ದು, 5 ಕೋಟಿ 49 ಲಕ್ಷ 98 ಸಾವಿರದ 950 ರೂಪಾಯಿ ದಂಡ ಪಾವತಿ ಬಾಕಿ ಇದೆ ಎಂದು, ಸಂಚಾರ ಠಾಣೆ ಇನ್ಸ್‌ಪೆಕ್ಟರ್ ಶ್ರೀನಿವಾಸ ಮೇಟಿ, ತಿಳಿಸಿದ್ದಾರೆ.

<><><>

ಧರ್ಮಸ್ಥಳ ಪ್ರಕರಣ, ಹಿಂದುಗಳ ಧಾರ್ಮಿಕ ನಂಬಿಕೆಯ ಮೇಲೆ ನಡೆದ, ಪ್ರಾಯೋಜಿತ ದಾಳಿ ಎಂಬುದು, ಈಗ ಬಹಿರಂಗಗೊಂಡಿದೆ ಎಂದು, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ತಿಳಿಸಿದ್ದಾರೆ. ಎಕ್ಸ್ ಮಾಧ್ಯಮದಲ್ಲಿ, ಈ ವಿಷಯ ಪ್ರಕಟಿಸಿ,

ಧಾರ್ಮಿಕ ನಂಬಿಕೆ ವಯಕ್ತಿಕ. ಆದರೆ, ಆಡಳಿತದಲ್ಲಿ ಸಮತೋಲನ ಪ್ರಮುಖ ಪಾತ್ರ ವಹಿಸುತ್ತದೆ. ಅಸ್ಪ ್ಟ ನಿಲುವಿನ, ರಾಜ್ಯ ಕಾಂಗ್ರೆಸ್ ಸರ್ಕಾರದಿಂದಲೇ, ರಾದ್ಧಾಂತ ಸೃಷ್ಟಿಯಾಯಿತು ಎಂದು, ದೂರಿದ್ದಾರೆ.

<><><>

ಪ್ರಾದೇಶಿಕ ಮಟ್ಟದ 10 ದಿನಗಳ, ಖಾದಿ ವಸ್ತುಗಳ ಮಾರಾಟ ಮತ್ತು ಪ್ರದರ್ಶನ ಮೇಳಕ್ಕೆ, ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷ, ಬಸನಗೌಡ ಪಾಟೀಲ, ತುರ್ವಿಹಾಳ, ಕೊಪ್ಪಳದಲ್ಲಿ, ಚಾಲನೆ ನೀಡಿದರು. ಕೊಪ್ಪಳ ಶಾಸಕ ರಾಘವೇಂದ್ರ ಹಿಟ್ನಾಳ ಮಾತನಾಡಿ, ದೇಹಕ್ಕೆ ಮತ್ತು ಆರೋಗ್ಯಕ್ಕೆ, ಖಾದಿ ಉಡುಪು ಹಿತಕರ. ರಾಷ್ಟ್ರೀಯ ವಸ್ತ್ರ ಖಾದಿ ಮಹತ್ವ ತಿಳಿಸಲು, ಮೇಳ ಆಯೋಜನೆಗೊಂಡಿದೆ ಎಂದರು.

<><><>

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರದಲ್ಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ತಾಲೂಕು ಕಲಾವಿದರ ಸಂಘ, 'ಹಾಡಿರೇ ರಾಗಗಳ, ತೂಗಿರೇ ದೀಪಗಳ' ಕಾರ್ಯಕ್ರಮ ಆಯೋಜಿಸಿತ್ತು. ರಾಜ್ಯ ನಾಟಕ ಅಕಾದೆಮಿ ಸದಸ್ಯ ಟಿ.ಎಚ್.ಲವಕುಮಾರ ಮಾತನಾಡಿ, ಜಾನಪದ ಕಲಾ ಪ್ರಕಾರಗಳನ್ನು ಪ್ರಚುರಪಡಿಸಲು, ವೇದಿಕೆಗಳ ಅಗತ್ಯವಿದೆ ಎಂದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಧಾರವಾಡ ಜಿಲ್ಲೆ, ಕುಂದಗೋಳದ, ಬೀಬಿ ಫಾತಿಮಾ ಮಹಿಳಾ ಸಂಘಕ್ಕೆ, 'ಈಕ್ವೇಟರ್ ಇನಿಷಿಯೇಟಿವ್' ಪ್ರಶಸ್ತಿಯ, ಗರಿ.
- ಆತ್ಮನಿರ್ಭರ ಭಾರತ, ಸಂಘಟನಾ ರಾಷ್ಟ್ರ ಪ್ರಶಸ್ತಿ: ಬಾಗಲಕೋಟೆ ಜಿಲ್ಲೆ, ಗುಳೇದಗುಡ್ಡದ, ಚಾಮುಂಡೇಶ್ವರಿ ಸಂಜೀವಿನಿ ಮಹಿಳಾ ಒಕ್ಕೂಟ, ಆಯ್ಕೆ.
- ಪುಣೆಯ ಗಾಯಕ ಸುಹಾಸ ವ್ಯಾಸ ಅವರಿಗೆ, ಪಂಡಿತ ಬಸವರಾಜ ರಾಜಗುರು ರಾಷ್ಟ್ರೀಯ ಪ್ರಶಸ್ತಿ, ಪ್ರದಾನ.
- ಸಂಚಾರ ನಿಯಮ ಉಲ್ಲಂಘನೆ: ಶೇಕಡ 50ರ ್ಟ ರಿಯಾಯಿತಿ ದಂಡ ಪಾವತಿಸಲು, ಸೆಪ್ಟಂಬರ್ 12 ರ ವರೆಗೆ ಅವಕಾಶ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>